# ನವೆಂಬರ್, 2017 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ಮೂರನೇ ವರ್ಷದ ತಾಳೆ ತೋಟಕ್ಕೆ ರಸಗೊಬ್ಬರವನ್ನು ಪ್ರತಿ ಎಕರೆಗೆ ೧೪೪ ಕೆ.ಜಿ ಯೂರಿಯಾ, ೨೧೩ ಕೆ ಜಿ ಸಿಂಗಲ್ ಸೂಪರ್ ಫಾಸ್ಫೇಟ್, ೧೧೪ ಕೆ.ಜಿ. ಮೂರೆಟ್ ಆಫ್ ಪೊಟಾಷ್ ಗಳನ್ನು ನಾಲ್ಕು ಕಂತಿನಲ್ಲಿ ಮತ್ತು ೨೮ ಕೆ.ಜಿ ಮೆಗ್ನೀ ಷಿಯಂ ಸಲ್ಫೇಟ್ ಗೊಬ್ಬರವನ್ನು ಎರಡು ಕಂತಿನಲ್ಲಿ ನೀಡುವುದು ಸೂಕ್ತ.

- ತಾಳೆ ಬೆಳೆಯೊಂದಿಗೆ ಅಂತರ ಬೆಳೆ ಬೇಸಾಯ ಕೈಗೊಳ್ಳಲು, ಬಿಸಿಲು, ಗಾಳಿ, ನೀರು ಮತ್ತು ಪೋಷಕಾಂಶಗಳಿಗೆ ತಾಳೆ ಸಸಿಯೊಂದಿಗೆ ಪೈಪೋಟಿ ನೀಡದಂತಹ ಸೂಕ್ತವಾದ ಅಂತರ ಬೆಳೆಯನ್ನು ಆರಿಸಿಕೊಳ್ಳುವುದು ಸೂಕ್ತ.

- ಅಂತರ ಬೆಳೆಗಳನ್ನು ಬೆಳೆಸುವಾಗ, ತಾಳೆ ಗಿಡಗಳ ಸಮೀಪದಲ್ಲಿ ಉಳಿಮೆ ಮಾಡಬಾರದು. ತಾಳೆ ತೋಟಗಳಲ್ಲಿಅಂತರ ಬೆಳೆಯನ್ನು ಬೆಳೆಸಬೇಕಾದಗ, ತಾಳೆ ಗಿಡಗಳಿಂದ 2 ರಿಂದ 3 ಮೀಟರಳಷ್ಟು ವ್ಯಾಸದ ಅಂತರ ಬಿಡಬೇಕು.

- ತಾಳೆ ಬೆಳೆ ತೋಟಗಳಲ್ಲಿ ಅಂತರ ಬೆಳೆಗಳನ್ನು ಬೆಳೆಯುವಾಗ ತಾಳೆ ಗಿಡಗಳ ಸಮೀಪದಲ್ಲಿ ಉಳಿಮೆ ಮಾಡಬಾರದು ಹಾಗೂ ಹಸಿರು ಗರಿಗಳನ್ನು ತೆಗೆದಲ್ಲಿ ಇಳುವರಿ ಕಡಿಮೆಯಾಗುವುದು.

- ತಾಳೆ ತೋಟದಲ್ಲಿ ಅಂತರ ಬೆಳೆ ಬೇಸಾಯ ಕೈಗೊಳ್ಳುವ ಸಂದರ್ಬದಲ್ಲಿ ತಾಳೆ ಸಸಿಗಳಿಗೆ ಮತ್ತು ಅಂತರಬೆಳೆಗೆ ಶಿಫಾರಸ್ಸು ಮಾಡಿರುವಂತೆ ಪ್ರತ್ಯೇಕ ಪ್ರಮಾಣದ ಗೊಬ್ಬರವನ್ನು ನೀಡುವುದು.